ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಮತ್ತು ಮೈಸೂರು ಜಿಲ್ಲೆಯಲ್ಲಿ ನಿರ್ಗತಿಕರು ಮತ್ತು ಸಣ್ಣ ಪಿಡುಪಳಿದಾರರಿಗೆ ಜನತಾ ಮನೆಗಳನ್ನು ನೀಡುವ ಯೋಜನೆಯಲ್ಲಿ ಎಷ್ಟು ಜನಗಳು ಗೋಡೆಗಳನ್ನು ಹಾಕಿಕೊಂಡಿದ್ದಾರೆ ? ಇದರಲ್ಲಿ ಎಷ್ಟು ಮನೆಗಳಿಗೆ ಮರದ ಸಾಮಾನು ಮತ್ತು ಹೆಂಚುಗಳನ್ನು ಒದಗಿಸಲಾಗಿದೆ. ಬಾಕಿ ಮನೆಗಳಿಗೆ ಯಾವಾಗ ಹೆಂಚು ಮತ್ತು ಮರದ ಸಾಮಗ್ರಿಗಳನ್ನು ಕೊಡಲಾಗುವುದು ?

ಶ್ರೀ ಎ ಲಕ್ಷ್ಮೀಸಾಗರ್ (ವಸತಿ ಮಂತ್ರಿಗಳು).—೧೯೮೩-೮೪ರಲ್ಲಿ ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ೨೮೫ಹಾಗೂ ಮೈಸೂರು ಜಿಲ್ಲೆಯಲ್ಲಿ ೩೧೬೦ ಫಲಾನುಭವಿಗಳು ಜನತಾ ಯೋಜನೆಯಲ್ಲಿ ಗೋಡೆಗಳನ್ನು ಹಾಕಿ ಕೊಂಡಿದ್ದಾರೆ

ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಇಷ್ಟರವರೆಗೆ ಯಾವ ಫಲಾನುಭವಿಗೂ ಹೆಂಚು ಮತ್ತು ಮರದ ಸಾಮಗ್ರಿಗಳನ್ನು ಒದಗಿಸಲಿಲ್ಲ.

ಮೈಸೂರು ಜಿಲ್ಲೆಯಲ್ಲಿ ಈ ವರ್ಷ ಇದುವರೆಗೆ ಒಟ್ಟು ೧೨೧೮ ಫಲಾನುಭವಿಗಳಿಗೆ ಮರದ ಸಾಮಾನು ಮತ್ತು ಹೆಂಚನ್ನು ಒದಗಿಸಲಾಗಿದೆ. ಉಳಿದವರಿಗೆ ಸಾಧ್ಯವಾದಷ್ಟು ಶೀಘ್ರದಲ್ಲೇ ಹೆಂಚು ಮತ್ತು ಮರ ಮುಟ್ಟುಗಳನ್ನು ಒದಗಿಸಲಾಗುವುದು.

ತಿಪಟೂರಿನಿಂದ ಬೆಂಗಳೂರಿಗೆ ಬಸ್ಸನ್ನು ಓಡಿಸುವುದು

೧೬೯ ಶ್ರೀ ಎಸ್.ಪಿ. ಗಂಗಾಧರಪ್ಪ (ತಿಪಟೂರು).—ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ?

ಅ) ತಿಪಟೂರಿನಿಂದ ಬೆಂಗಳೂರಿಗೆ ತಿಪಟೂರಿನಿಂದಲೇ ಹೊರಡುವ ಬಸ್ಸು ಇಲ್ಲದಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ತಿಪಟೂರಿನಿಂದ ಬೆಂಗಳೂರಿಗೆ ನೇರವಾಗಿ ಬಸ್ಸೊಂದನ್ನು ಹೊರಡಿಸಲು ಸರ್ಕಾರದವರು ಕೈಗೊಂಡಕ್ರಮವೇನು ?

ಶ್ರೀ ಎಂ.ಪಿ. ಪ್ರಕಾಶ್ (ಸಾರಿಗೆ ರಾಜ್ಯ ಮಂತ್ರಿಗಳು).—

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ತಿಪಟೂರಿನಿಂದ ಕಾಣಿಗಲ್ ಮಾರ್ಗವಾಗಿ ಬೆಂಗಳೂರಿಗೆ ಈ ಕೆಳಗೆ ಕಾಣಿಸಿರುವ ವೇಳೆಯ ಪ್ರಕಾರ ಬಸ್ಸು ಸೌಲಭ್ಯ ಒದಗಿಸಿದೆ.

೨೦೪೫	ತಿಪಟೂರು	೦೭೧೫
೧೭೫೫	ಕಾಣಿಗಲ್	೧೮೦೫
೧೭೪೫	ಕಾಣಿಗಲ್	೧೦೧೦
೧೫೩೦	ಬೆಂಗಳೂರು	೧೨೩೦

ಆ) ಹೆಚ್ಚು ಪ್ರಯಾಣಿಕರ ಒತ್ತಡ ಕಂಡುಬಂದಲ್ಲಿ ಕರ್ನಾಟಕ ರಾಜ್ಯ ರಸ್ತೆಸಾರಿಗೆ ಸಂಸ್ಥೆಯು ತಿಪಟೂರಿನಿಂದ ತುಮಕೂರು ಮಾರ್ಗವಾಗಿ ಬೆಂಗಳೂರಿಗೆ ನೇರ ಬಸ್ ಸೌಕರ್ಯ ಕಲ್ಪಿಸುವುದು.

PAPERS LAID ON THE TABLE

SRI, V. L. PATIL (Minister for Revenue).—Mr. Speaker I beg to lay.—

1. Notification No. RD 12 TRM 83 dated 22nd November 1983

Remission of land revenue in respect of 233 villages of Nagamangala Taluk for the year 1980-1981.